# ಕರ್ನಾಟಕ ವಿಧಾನ ಸಭೆ ಸಚಿವಾಲಯ

ವಿಷಯ: ಕರ್ನಾಟಕ ವಿಧಾನ ಸಭೆ ಸಚಿವಾಲಯದಲ್ಲಿ ಲಾಡ್ರ್ಸ್ ಮಾದರಿಯ ಸಂಶೋಧನಾ ವಿಭಾಗಕ್ಕೆ ವಿವಿಧ ವೃಂದಗಳ ಹುದ್ದೆಗಳನ್ನು ಸೃಜಿಸುವ ಬಗ್ಗೆ.

******

ಓದಲಾಗಿದೆ:-

1. ಸಚಿವಾಲಯದ ಪತ್ರದ ಸಂಖ್ಯೆ: ಕವಿಸಸ/ಆ-1/ಆರ್ ಅಂಡ್ ಆರ್/2(I.P.)/2009, ದಿನಾಂಕ: 09.09.2011.
2. ಸಚಿವಾಲಯದ ಅರೆ ಸರ್ಕಾರಿ ಪತ್ರ ಸಂಖ್ಯೆ:ಕವಿಸಸ/ಆ-1/136/ಶಾ.ಬ.ಸ್ಥಾ.ಮು.ಸ್ಥ/2011 ದಿನಾಂಕ: 21.11.2011.
3. ಆರ್ಥಿಕ ಇಲಾಖೆ ಪತ್ರದ ಸಂಖ್ಯೆ: ಆಇ/449/ವೆಚ್ಚ-10/2011, ದಿನಾಂಕ: 03.12.2011.
4. ಕಡತದ ಸಂಖ್ಯೆ:ಕವಿಸಸ/ಆರ್ ಅಂಡ್ ಆರ್/2(I.P.)/2009.

ಪ್ರಸ್ತಾವನೆ:-

ಸಂಸದೀಯ ವಿಷಯಗಳು ಹಾಗೂ ಇತರೆ ಮುಖ್ಯ ವಿಷಯಗಳ ಬಗ್ಗೆ ತ್ವರಿತ ಮಾಹಿತಿಗಳನ್ನು ಮಾನ್ಯ ಪೀಠಾಸೀನಾಧಿಕಾರಿಗಳು, ಮಾನ್ಯ ಮಂತ್ರಿಗಳು, ಮಾನ್ಯ ಸಂಸದೀಯ ಪದಾಧಿಕಾರಿಗಳು ಹಾಗೂ ಮಾನ್ಯ ಸದಸ್ಯರುಗಳಿಗೆ ಒದಗಿಸುವ ನಿಟ್ಟಿನಲ್ಲಿ ಲೋಕಸಭೆಯ ಲಾಡ್ರ್ಸ್ ಸಂಸ್ಥೆಯ ಮಾದರಿಯಲ್ಲಿ ಈ ಸಚಿವಾಲಯದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸಚಿವಾಲಯದ ಶ್ರೀ ಎಂ.ಮಂಜುನಾಥ್, ಜಂಟಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ಸಲ್ಲಿಸಿದ ವರದಿ ಮೇರೆಗೆ ಲಾಡ್ರ್ಸ್ ಮಾದರಿಯ ಸಂಶೋಧನಾ ವಿಭಾಗವನ್ನು ಸ್ಥಾಪಿಸುವ ಸಂಬಂಧ ವಿವಿಧ ವೃಂದಗಳ ಈ ಕೆಳಕಂಡ 35 ಹುದ್ದೆಗಳನ್ನು ಸೃಜಿಸುವ ಸಂಬಂಧ ಮಾನ್ಯ ಸಭಾಧ್ಯಕ್ಷರ ಅನುಮೋದನೆ ಮೇರೆಗೆ ಕ್ರ.ಸಂ.(1)ಮತ್ತು (2)ರಲ್ಲಿ ಓದಲಾಗಿರುವ ಪತ್ರಗಳಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿತ್ತು.

| ಕ್ರ.ಸಂ. | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ನಿರ್ದೇಶಕರು (ಜಂಟಿ ಕಾರ್ಯದರ್ಶಿ ಶ್ರೇಣಿ) | 01 |
| 2 | ಜಂಟಿ ನಿರ್ದೇಶಕರು (ಉಪ ಕಾರ್ಯದರ್ಶಿ ಶ್ರೇಣಿ) | 01 |
| 3 | ಉಪ ನಿರ್ದೇಶಕರು/ಅಧೀನ ಕಾರ್ಯದರ್ಶಿ (ಸಂಶೋಧನಾ ಮತ್ತು ಉಲ್ಲೇಖನಾ)(ಅಧೀನ ಕಾರ್ಯದರ್ಶಿ ಶ್ರೇಣಿ) | 02 |
| 4 | ಸಹಾಯಕ ನಿರ್ದೇಶಕರು/ಶಾಖಾಧಿಕಾರಿ (ಸಂಶೋಧನಾ ಮತ್ತು ಉಲ್ಲೇಖನಾ)(ಶಾಖಾಧಿಕಾರಿ ಶ್ರೇಣಿ) | 04 |
| 5 | ಸಂಶೋಧನಾ ಸಹಾಯಕ (ಹಿರಿಯ ಸಹಾಯಕ ಶ್ರೇಣಿ) | 05 |
| 6 | ಸಹಾಯಕರು (ಸಹಾಯಕರ ಶ್ರೇಣಿ) | 04 |
| 7 | ಶೀಘ್ರಲಿಪಿಗಾರರು (ಸಹಾಯಕರ ಶ್ರೇಣಿ) | 02 |
| 8 | ಕಿರಿಯ ಸಹಾಯಕರು | 06 |
| 9 | ದಲಾಯತ್ | 10 |

ಅದರಂತೆ, ಕರ್ನಾಟಕ ವಿಧಾನಸಭೆ ಸಚಿವಾಲಯದ ಲಾಡ್ರ್ಸ್ ಮಾದರಿಯ ವಿಭಾಗಕ್ಕೆ ಮೇಲ್ಕಂಡ ವಿವಿಧ ವೃಂದಗಳ 35 ಹುದ್ದೆಗಳ ಸೃಜನೆಗೆ ಆರ್ಥಿಕ ಇಲಾಖೆಯು ಕ್ರ.ಸಂ.(3)ರಲ್ಲಿ ಓದಲಾಗಿರುವ ಪತ್ರದಲ್ಲಿ ತನ್ನ ಸಹಮತಿಯನ್ನು ನೀಡಿರುತ್ತದೆ.

(ಜಂಟಿ ಕಾರ್ಯದರ್ಶಿ ಶ್ರೇಣಿಯ)- 01 ಹುದ್ದೆಯ ಸೃಜನೆಗೆ ಸಂಬಂಧಿಸಿದಂತೆ ನಿಯಮಾವಳಿಗಳ ರೀತ್ಯಾ ಸಕ್ಷಮ ಪ್ರಾಧಿಕಾರವಾದ ವಿಶೇಷ ಮಂಡಳಿಗೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಉಳಿದಂತೆ ಜಂಟಿ ನಿರ್ದೇಶಕರು(ಉಪ ಕಾರ್ಯದರ್ಶಿ ಶ್ರೇಣಿಯ) ಮತ್ತು ಕೆಳಹಂತದ ವಿವಿಧ ವೃಂದಗಳ ಹುದ್ದೆಗಳನ್ನು ಸೃಜಿಸುವ ಸಕ್ಷಮ ಪ್ರಾಧಿಕಾರವು ಮಾನ್ಯ ಸಭಾಧ್ಯಕ್ಷರಾಗಿರುವ ಕಾರಣ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಗೆ ಕ್ರ.ಸಂ. (4)ರಲ್ಲಿ ಓದಲಾಗಿರುವ ಕಡತದಲ್ಲಿ ಮಾನ್ಯ ಸಭಾಧ್ಯಕ್ಷರು ಅನುಮೋದನೆ ನೀಡಿರುತ್ತಾರೆ.

ಆದೇಶ ಸಂಖ್ಯೆ:ಕವಿಸಸ/ಆ-1/277/ಆರ್ ಅಂಡ್ ಆರ್/2(I.P.)/2011
ಬೆಂಗಳೂರು, ದಿನಾಂಕ:7ನೇ ಡಿಸೆಂಬರ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನಸಭೆ ಸಚಿವಾಲಯದಲ್ಲಿ ಲಾರ್ಡ್ಸ್ ಮಾದರಿಯ ಸಂಶೋಧನಾ ವಿಭಾಗವನ್ನು ಸ್ಥಾಪಿಸುವ ಸಂಬಂಧ ವಿವಿಧ ವೃಂದಗಳಲ್ಲಿ ಈ ಕೆಳಕಂಡ 34 ಹುದ್ದೆಗಳನ್ನು ಸೃಜಿಸಲಾಗಿದೆ.

| ಕ್ರ.ಸಂ. | ಹುದ್ದೆಗಳು | ವೇತನ ಶ್ರೇಣಿ ರೂ. | ಸೃಜಿಸಲ್ಪಟ್ಟ ಹುದ್ದೆಗಳ ಸಂಖ್ಯೆ |
|---|---|---|---|
| 1 | ಜಂಟಿ ನಿರ್ದೇಶಕರು (ಉಪ ಕಾರ್ಯದರ್ಶಿ ಶ್ರೇಣಿ) | 20025-28275 | 01 |
| 2 | ಉಪ ನಿರ್ದೇಶಕರು(ಸಂಶೋಧನಾ ಮತ್ತು ಉಲ್ಲೇಖನಾ) (ಅಧೀನ ಕಾರ್ಯದರ್ಶಿ ಶ್ರೇಣಿ) | 14050-25050 | 02 |
| 3 | ಸಹಾಯಕ ನಿರ್ದೇಶಕರು (ಸಂಶೋಧನಾ ಮತ್ತು ಉಲ್ಲೇಖನಾ)(ಶಾಖಾಧಿಕಾರಿ ಶ್ರೇಣಿ) | 11400-21600 | 04 |
| 4 | ಸಂಶೋಧನಾ ಸಹಾಯಕ (ಹಿರಿಯ ಸಹಾಯಕರ ಶ್ರೇಣಿ) | 10000-18150 | 05 |
| 5 | ಸಹಾಯಕರು (ಸಹಾಯಕರ ಶ್ರೇಣಿ) | 8000-14800 | 04 |
| 6 | ಶೀಘ್ರಲಿಪಿಗಾರರು (ಸಹಾಯಕರ ಶ್ರೇಣಿ) | 8000-14800 | 02 |
| 7 | ಕಿರಿಯ ಸಹಾಯಕರು | 5800-10500 | 06 |
| 8 | ದಲಾಯತ್ | 4800-7275 | 10 |

ಈ ಆದೇಶವನ್ನು ಪತ್ರ ಸಂಖ್ಯೆ: ಆಇ/449/ವೆಚ್ಚ-10/2011 ದಿನಾಂಕ: 03.12.2011 ರಲ್ಲಿನ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,

(ಕೆ.ನೂರ್ ಮಹಮದ್)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಪ್ರತಿಗಳು:

1. ಕಾರ್ಯದರ್ಶಿ, ಕವಿಸಸ
2. ಅಪರ ಕಾರ್ಯದರ್ಶಿ, ಕವಿಸಸ
3. ಮಹಾಲೇಖಪಾಲರು(ಆ ಮತ್ತು ಆ), ಕರ್ನಾಟಕ, ಬೆಂಗಳೂರು.

(1)

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ವಿಧಾನ ಸಭೆಯ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5074, ವಿಧಾನ ಸೌಧ,
ಬೆಂಗಳೂರು- 560 233.
LEGISLATIVE ASSEMBLY SECRETARIAT,
P.B. No.5074, Vidhana Soudha,
Bangalore- 560233.

ಸಂಖ್ಯೆ: ಕವಿಸಸ/ಅ-3/15/ಕ್ರೋಮಾ/2016-17

ದಿನಾಂಕ/ Dated: 09.05.2017

ಅತ್ಯಾದ್ಯತೆ
ಮಾಹಿತಿ ಹಕ್ಕು

## ಸುತ್ತೋಲೆ

ವಿಷಯ: 2016-17ನೇ ಸಾಲಿನ ವಾರ್ಷಿಕ ವರದಿ ತಯಾರಿಕೆಗೆ ಮಾಹಿತಿ ಒದಗಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ: ಕಮಾಆ.01.ಎಎಸ್‌ಬಿ (ವಾವತ).2016-17, ದಿನಾಂಕ: 20.04.2017.

--------

ಕರ್ನಾಟಕ ಮಾಹಿತಿ ಆಯೋಗವು 2016-17ನೇ ಸಾಲಿನ 12ನೇ ವಾರ್ಷಿಕ ವರದಿಯನ್ನು ಸಿದ್ಧಗೊಳಿಸುವ ಕಾರ್ಯವನ್ನು ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ, ಮಾಹಿತಿ ಸಂಗ್ರಹಿಸಲು ಅನುವಾಗುವಂತೆ ಆಯಾಯಾ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಿಗಳಿಂದ ಈ ಕೆಳಕಂಡ ಮಾಹಿತಿಗಳನ್ನೊಳಗೊಂಡ ವಿವರವನ್ನು ನಿಗದಿತ ಪ್ರಪತ್ರದಲ್ಲಿ ಸಂಗ್ರಹಿಸಿ, ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸುವಂತೆ ಉಲ್ಲೇಖಿತ ಸರ್ಕಾರಿ ಪತ್ರದಲ್ಲಿ ಕರ್ನಾಟಕ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಕೋರಿರುತ್ತಾರೆ.

(ಅ) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರಕ್ಕೆ ಮಾಹಿತಿ ಕೋರಿ ಸಲ್ಲಿಸಲಾದ ಅರ್ಜಿಗಳ ಸಂಖ್ಯೆ.

(ಆ) ಅಂತಹ ಮಾಹಿತಿ ಕೋರಿಕೆ ಅರ್ಜಿಗಳ ಪೈಕಿ, ಕೋರಲಾದ ಮಾಹಿತಿ ಪಡೆಯಲು ಅರ್ಹವಲ್ಲವೆಂದು ತೆಗೆದುಕೊಂಡ ನಿರ್ಣಯಗಳ ಸಂಖ್ಯೆ ಹಾಗೂ ತತ್ಸಂಬಂಧ ಅಧಿನಿಯಮಗಳ ಯಾವ ಕಲಂಗಳನ್ವಯ ತೀರ್ಮಾನ ಕೈಗೊಳ್ಳಲಾಗಿದೆ.

(ಇ) ಮಾಹಿತಿ ಹಕ್ಕು ಅಧಿನಿಯಮ-2005ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಮೇಲೆ ತೆಗೆದುಕೊಂಡ ಶಿಸ್ತಿನ ಕ್ರಮ ವಿವರಗಳು.

(ಈ) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿ ಹಕ್ಕು ಅಧಿನಿಯಮದಡಿ ಸಂಗ್ರಹಿಸಲಾದ ಶುಲ್ಕದ ಮೊಬಲಗು.

(ಉ) ಸಾರ್ವಜನಿಕ ಪ್ರಾಧಿಕಾರವು ಮಾಹಿತಿ ಹಕ್ಕು ಅಧಿನಿಯಮ -2005ರ ಆಡಳಿತ ಹಾಗೂ ಮೂಲ ತತ್ವದ ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸಲು ತೆಗೆದುಕೊಂಡ ಕ್ರಮಗಳು ಹಾಗೂ ಇತರೆ ವಾಸ್ತವಾಂಶಗಳು.

(ಊ) ಮಾಹಿತಿ ಹಕ್ಕು ಅಧಿನಿಯಮ-2005ರನ್ವಯ ಮಾಹಿತಿ ಪಡೆಯಲು ಪ್ರಸ್ತುತ ಮಾಹಿತಿ ಹಕ್ಕಿಗೆ ಸಂಬಂಧಿಸಿದಂತೆ ಕಾರ್ಯಗತಗೊಳಿಸಬಹುದಾದ ಇತರೆ ವಿಷಯಗಳ ಬಗ್ಗೆ ನಿರ್ದಿಷ್ಟವಾಗಿ ಅಭಿವೃದ್ಧಿ, ಏಳಿಗೆ, ಆಧುನೀಕರಣ, ಸುಧಾರಣೆ/ತಿದ್ದುಪಡಿಗಳನ್ನೊಳಗೊಂಡ ಶಿಫಾರಸ್ಸುಗಳು.

ಆದುದರಿಂದ, ಮಾಹಿತಿ ಹಕ್ಕು ಅಧಿನಿಯಮ-2005ಕ್ಕೆ ಸಂಬಂಧಿಸಿದಂತೆ, ದಿನಾಂಕ: 01.04.2016 ರಿಂದ 31.03.2017 ರವರೆಗಿನ ಅವಧಿಯ 2016-17ನೇ ಸಾಲಿನ ಈ ಸಚಿವಾಲಯದ ಕ್ರೋಢೀಕೃತ ಮಾಹಿತಿಯನ್ನು ಕರ್ನಾಟಕ ಮಾಹಿತಿ ಆಯೋಗಕ್ಕೆ ಕಳುಹಿಸಲು ಅನುಕೂಲವಾಗುವಂತೆ ಆಯಾಯ ಶಾಖೆಗಳು (ಶಾಸಕರ ಭವನವೂ ಸೇರಿದಂತೆ) ತಮ್ಮ ಶಾಖೆಗೆ ಸಂಬಂಧಿಸಿದ ಮೇಲ್ಕಂಡ ವಿವರಗಳನ್ನು ಲಗತ್ತಿಸಿರುವ ಪ್ರಪತ್ರ ಸಂಖ್ಯೆ: I, II, III ಗಳಲ್ಲಿ ಭರ್ತಿ ಮಾಡಿ, ಆಡಳಿತ ಶಾಖೆ-3ಕ್ಕೆ ತಪ್ಪದೇ ದಿನಾಂಕ: **17.05.2017 ರೊಳಗೆ** ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

ಅಲ್ಲದೆ, ಮಾಹಿತಿ ಹಕ್ಕು ಅಧಿನಿಯಮ ಕಾಯ್ದೆಯ ಕಲಂ 4(1)(ಎ) ಮತ್ತು 4(1)(ಬಿ)ರಲ್ಲಿ ಬರುವ ಮಾಹಿತಿಗಳನ್ನು ಕಡ್ಡಾಯವಾಗಿ ಈ ಸಚಿವಾಲಯದ ಅಂತರ್ಜಾಲ ತಾಣದಲ್ಲಿ ಪ್ರಕಟಿಸುವ ಸಂಬಂಧದಲ್ಲಿ, ಆಯಾಯ ಶಾಖೆಗಳು ತಮ್ಮ ಶಾಖೆಗಳ ಇತ್ತೀಚಿನ (updated) ಮಾಹಿತಿಯನ್ನು ಗಣಕ ಕೇಂದ್ರಕ್ಕೆ ಕೂಡಲೇ ಒದಗಿಸಲು ಸಹ ಕೋರಲಾಗಿದೆ.

(ಎಂ.ಎಸ್.ಕುಮಾರಸ್ವಾಮಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಗೆ

1. ಸಂಬಂಧಪಟ್ಟ ಮೇಲ್ಮನವಿ (ಅಪೀಲು) ಪ್ರಾಧಿಕಾರಗಳು.
2. ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗಳು.
3. ಸಂಬಂಧಪಟ್ಟ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು.

ಪ್ರತಿಗಳು:

1. ಕಾರ್ಯದರ್ಶಿ (I/c), ಕವಿಸಸ.
2. ಅಧೀನ ಕಾರ್ಯದರ್ಶಿ ಹಾಗೂ ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಸಸ.
3. ಸೂಚನಾ ಫಲಕಕ್ಕೆ.
4. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತ/ಬಿಡಿ ಪ್ರತಿಗಳು.